ಕರ್ನಾಟಕ ಸರ್ಕಾರ

# ಮಕ್ಕಳ ರಕ್ಷಣಾ ನಿರ್ದೇಶನಾಲಯ

**C/o ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ॥ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಕರ್ನಾಟಕ**

**E-mail ID:icps.kar@gmail.com** **Phone No: 080-22879381**

ಸಂಖ್ಯೆ:ಕೆಎಸ್ಐಸಿಪಿಎಸ್/ಐಇಸಿ/ವ..ಜಾ/06/2020-21 ದಿನಾಂಕ: 8-9-2021

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಬೆಂಗಳೂರು ನಗರ, ಕೊಪ್ಪಳ, ಬಳ್ಳಾರಿ,
ಬಾಗಲಕೋಟೆ, ಕಲ್ಬುರ್ಗಿ, ತುಮಕೂರು ಜಿಲ್ಲೆ.

ಮಾನ್ಯರೇ,

**ವಿಷಯ:**-ಮಕ್ಕಳ ಜಾಗೃತಿ ಸಂಸ್ಥೆ ವತಿಯಿಂದ ಸ್ವೀಕರಿಸಲಾಗಿರುವ ಮಕ್ಕಳ ಪಾಲನಾ ಸಂಸ್ಥೆಯ ಮಕ್ಕಳಿಗಾಗಿ ಮಕ್ಕಳ ಸಮಗ್ರ ಕಲಿಕೆ ಮತ್ತು ಅಭಿವೃದ್ಧಿ ಕುರಿತ **"ಕಲಿಕೆ"** ಕಾರ್ಯಕ್ರಮದ ಬಗ್ಗೆ.

**ಉಲ್ಲೇಖ:** ಮಕ್ಕಳ ಜಾಗೃತಿ ಇವರ ಪ್ರಸ್ತಾವನೆ ದಿನಾಂಕ:21-6-2021

* * * *

ರ಼ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಕ್ಕಳ ಜಾಗೃತಿ ಸಂಸ್ಥೆಯಿಂದ ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ ಮಕ್ಕಳಿಗಾಗಿ 'ಮಕ್ಕಳ ಸಮಗ್ರ ಕಲಿಕೆ ಮತ್ತು ಅಭಿವೃದ್ಧಿ' ಕುರಿತ 3 ವರ್ಷಗಳ ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದೆ. ಪ್ರಥಮ ಹಂತದಲ್ಲಿ ಸದರಿ ಕಾರ್ಯಕ್ರಮವನ್ನು ಬೆಂಗಳೂರು ನಗರ, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ಕಲ್ಬುರ್ಗಿ, ತುಮಕೂರು ಜಿಲ್ಲೆಯ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಯ ಮಕ್ಕಳಿಗೆ ಮಕ್ಕಳ ಕಲಿಕೆ ಸಾಮರ್ಥ್ಯ ಹೆಚ್ಚಿಸುವಲ್ಲಿ ಹಾಗೂ ಮಕ್ಕಳ ಅಭಿವೃದ್ಧಿಗೆ ಹೆಚ್ಚಿನ ಸಹಕಾರಿಯಾಗುವಂತಹ ಮಕ್ಕಳ ಸಮಗ್ರ ಕಲಿಕೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು **"ಕಲಿಕೆ"** ಕಾರ್ಯಕ್ರಮದ ಅಡಿಯಲ್ಲಿ ಮಕ್ಕಳ ಜಾಗೃತಿ ಸಂಸ್ಥೆಯ ಸಿಬ್ಬಂದಿಗಳು ಖುದ್ದು ಭೇಟಿ ನೀಡಿ ವಿವಿಧ ಕಲಿಕಾ ಚಟುವಟಿಕೆಗಳನ್ನು ಮಕ್ಕಳಿಗೆ ಆಯೋಜಿಸಲಾಗುವುದು ಎಂದು ತಿಳಿಸಿರುತ್ತಾರೆ.

ಸದರಿ ಕಾರ್ಯಕ್ರಮ ಮಕ್ಕಳ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗುವುದರಿಂದ ಹಾಗೂ ಸದರಿ ಕಾರ್ಯಕ್ರಮಕ್ಕೆ ಮಕ್ಕಳ ಜಾಗೃತಿ ಇವರೇ ಆರ್ಥಿಕ ಸಂಪನ್ಮೂಲವನ್ನು ಒದಗಿಸುತ್ತಿರುವುದರಿಂದ ಕೇಂದ್ರ ಕಛೇರಿಯು ಮಕ್ಕಳ ಜಾಗೃತಿ ಇವರ ಪ್ರಸ್ತಾವನೆಯನ್ನು ಅಂಗೀಕರಿಸಿದ್ದು, ಇವರೊಂದಿಗೆ ಎಮ್ಒಯು ಸಹ ಮಾಡಿಕೊಳ್ಳಲಾಗಿರುತ್ತದೆ. ಮಕ್ಕಳ ಜಾಗೃತಿ ಸಂಸ್ಥೆ ವತಿಯಿಂದ ತಮ್ಮ ಜಿಲ್ಲೆಗಳಿಗೆ ನೇಮಕವಾಗಿರುವ ಸಿಬ್ಬಂದಿಗಳು ಸಂಸ್ಥೆಗಳಿಗೆ ಮಕ್ಕಳ ಚಟುವಟಿಕೆಗಳನ್ನು ಆಯೋಜಿಸಲು **"ಕಲಿಕೆ"** ಕಾರ್ಯಕ್ರಮದ ಅಡಿಯಲ್ಲಿ ಗುರುತಿನ ಚೀಟಿ ಧರಿಸಿರುವ ಫೆಸಿಲಿಟೇಟರ್‌ಗಳು ಭೇಟಿ ನೀಡಿದಾಗ ಸಹಕರಿಸುವಂತೆ ಮೇಲೆ ವಿವರಿಸಿರುವ ಜಿಲ್ಲೆಗಳ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಸೂಚಿಸಲು ಕೋರಲಾಗಿದೆ. ಮಕ್ಕಳ ಜಾಗೃತಿ ಸಿಬ್ಬಂದಿಗಳ ವಿವರ ಮತ್ತು ಎಮ್ಒಯು(MOU) ಪತ್ರಕ್ಕೆ ಲಗತ್ತಿಸಿದೆ.

ತಮ್ಮ ವಿಶ್ವಾಸಿ,
8.9.21
ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು.